## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿತ್ತಾಪೂರ.

## ಸಿಸಿ ನಂ.295/2017

ಫಿರ್ಯಾದಿಃ ಸರಕಾರದ ಪರವಾಗಿಃ **ಕಾಳಗಿ ಪೊಲೀಸ್ ಠಾಣೆ.**

**-ಃಃ ವಿರುದ್ದ ಃಃ-**

ಆರೋಪಿ/ತರುಃ

**1.** ಮಂಜುನಾಥ ತಂದೆ ಬಸವಣಪ್ಪ ಧಮ್ಮೂರ,
ವಃ 32 ವರ್ಷ, ಉಃ ಒಕ್ಕಲುತನ,
ಸಾಃ ಕಂದಗೂಳ ಗ್ರಾಮ, ಚಿತ್ತಾಪೂರ ತಾಲ್ಲೂಕು,
ಕಲಬುರಗಿ ಜಿಲ್ಲೆ.

**2.** ಆನಂದ ತಂದೆ ರೇವಣಸಿದ್ದಪ್ಪ ಚನ್ನೂರು,
ವಃ 29 ವರ್ಷ, ಉಃ ಒಕ್ಕಲುತನ,
ಸಾಃ ಕಂದಗೂಳ ಗ್ರಾಮ, ಚಿತ್ತಾಪೂರ ತಾಲ್ಲೂಕು,
ಕಲಬುರಗಿ ಜಿಲ್ಲೆ.

**3.** ಬಸಯ್ಯ ತಂದೆ ವೀರಯ್ಯ ಗಣಸಿಂದಗಿ,
ವಃ 25 ವರ್ಷ, ಉಃ ಒಕ್ಕಲುತನ,
ಸಾಃ ಕಂದಗೂಳ ಗ್ರಾಮ, ಚಿತ್ತಾಪೂರ ತಾಲ್ಲೂಕು,
ಕಲಬುರಗಿ ಜಿಲ್ಲೆ.

----

## ದೋ ಷಾ ರೋ ಪ ಣೆ

ನಾನು ಶ್ರೀ ಸಂತೋಷಕುಮಾರ ದೈವಜ್ಞ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಚಿತ್ತಾಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

ಇಂದು ದಿನಾಂಕ 29-04-2017 ರಂದು ಬೆಳಿಗ್ಗೆ 09-00 ಗಂಟೆಯ ಸುಮಾರಿಗೆ ಕಾಳಗಿ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಕಂದಗೂಳ ಗ್ರಾಮ, ಕಂದಗೂಳ ಗ್ರಾಮ ಪಂಚಾಯಿತ ಕಾರ್ಯಲಯದ ಪಿ.ಡಿ.ಓ ಮತ್ತು ಸಿಬ್ಬಂದಿಯವರು ಕುಡುವ ಕೊಣೆಯಲ್ಲಿ ಬಸವ ಜಯಂತಿ

ಪ್ರಯುಕ್ತ ಬಸವ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಚಹಾ ಬೀಸಕೇಟ ಸೇವನೆ ಮಾಡಿದ ನಂತರ ಸದರಿ 1 ನೇ ರಿಂದ 3 ನೇ ಆರೋಪಿತರಾದ ನೀವು ಚಾಸಾ-1 ರವರಿಗೆ ಕಂದಗೂಳ ಗ್ರಾಮದ ಬಸವ ಸಮೀತಿಗೆ ಜಯಂತಿ ಆಚರಿಸಲು ಹಣ ಕೊಡ ಅಂತಾ ತಕರಾರು ಮಾಡಿದ್ದು. ಚಾಸಾ-1 ರವರು ಆರೋಪಿತರಿಗೆ ಎಸ್.ಸಿ. ಎಸ್.ಟಿ. ಜನರಿಗೆ ಮಾತ್ರ ಸರ್ಕಾರದ ನೇಮದ ಪ್ರಕಾರ ಸಾಹಯ ಧನ ಕೊಡಲು ಬರುತ್ತದೆ. ಉಳಿದ ಸಾಮಾನ್ಯ ಜಯಂತಿಗೆ ಸರ್ಕಾರದಲ್ಲಿ ಹಣ ಕೊಡಲು ಅವಕಾಶವಿಲ್ಲ ಅಂತಾ ತಿಳಿಸಿದರೂ ಕೂಡ ಸದರಿ ಆರೋಪಿತರು ಚಾಸಾ-1 ರವರಿಗೆ ಕುಳಿತ ಖುರ್ಚಿಯಿಂದ ನೂಕಿಸಿಕೊಟ್ಟು ನೀನು ಆಯೋಗ್ಯ ಪಿ.ಡಿ.ಓ. ನಿನಗೆ ಅಂಗಿ ಪ್ಯಾಂಟ ಬಿಚ್ಚಿಸಿ ಮೇಟ್ಟು ಕಟ್ಟಿ ಮೇರವಣಿಗೆ ಮಾಡಬೇಕು ಅಂತಾ ಕರ್ತವ್ಯದಲ್ಲಿ ಅಡೆ-ತಡೆ ಉಂಟು ಮಾಡಿದ್ದು ಕರ್ತವ್ಯ ಪಾಲನೆಯಲ್ಲಿ ತೊಂದರೆ ಮಾಡಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.ಕಲಂಃ 353 ಸಹವಾಚಕ ಕಲಂಃ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೇದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಸದರಿ ಆರೋಪಿತರು ಚಾಸಾ-1 ರವರಿಗೆ ನೀನು ಖುರ್ಚಿ ಮೇಲೆ ಕೂಡಬೇಡಾ ನೆಲದ ಮೇಲೆ ಕೂಡು ನೀನು ಜಾತಿವಾದಿ ಇದ್ದಿಲೇ ಮಗನೇ ಅಂತಾ ತಕರಾರು ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಸಾರ್ಜನಿಕ ಸ್ಥಳದಲ್ಲಿ ಅವಮಾನಪಡಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.ಕಲಂಃ 504 ಸಹವಾಚಕ ಕಲಂಃ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೇಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಚಾಸಾ-1 ರವರಿಗೆ ಕರ್ತವ್ಯಕ್ಕೆ ಅಡೆತಡೆ ಮಾಡಿ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.ಕಲಂಃ 506 ಸಹವಾಚಕ ಕಲಂಃ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**<u>ಆರೋಪಿ/ತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಆ-1 ಆ-2 ಆ-3

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

ಆ-1 ಆ-2 ಆ-3

(ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 20-06-2023

**ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾ.ದಂ. ಚಿತ್ತಾಪೂರ.**